ವಿಜಯ ಕರ್ನಾಟಕ

# ಈ ಚಾಂಪಿಯನ್ನರು ಆಟಕ್ಕೂ ಜೈ ಪಾಠಕ್ಕೂ ಸೈ

» ಮೊದಲ ಪುಟದಿಂದ

13 ಕ್ರೀಡಾಪಟುಗಳು 80ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. 34 ಮಂದಿ ಉನ್ನತ ಶ್ರೇಣಿಯಲ್ಲಿ ಪಾಸಾದರೆ, 10 ಮಂದಿ ಕ್ರೀಡಾಪಟುಗಳು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ. ಜೈನ್ ಕಾಲೇಜಿನಲ್ಲಿ ಒಟ್ಟು 60 ಮಂದಿ ಕ್ರೀಡಾಪಟುಗಳು ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 59 ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

**ಟಿಟಿ ಚಾಂಪಿಯನ್‌ಗೆ ಶೇ.96 ಅಂಕ**: ಬೆಂಗಳೂರಿನ ಜೈನ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ರಾಷ್ಟ್ರೀಯ ಕ್ರೀಡಾ ಪಟುಗಳು ಶೇ.99 ರಷ್ಟು ಫಲಿತಾಂಶ ಗಳಿಸಿದ್ದಾರೆ. ರಾಷ್ಟ್ರೀಯ ರೋಯಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಸ್ನೇಹಾ ಕಾಮರ್ಸ್‌ನಲ್ಲಿ ಶೇ.89 ಅಂಕ ಗಳಿಸಿ ಕ್ರೀಡೆಯಿಂದ ಶಿಕ್ಷಣಕ್ಕೆ ಯಾವುದೇ ಅಡ್ಡಿ ಇಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ. ರಾಷ್ಟ್ರೀಯ ಟಿಟಿ ಆಟಗಾರ್ತಿ ರಕ್ಷಾ ರಾಮ್ ಕುಮಾರ್ ವಿಜ್ಞಾನ ವಿಭಾಗದಲ್ಲಿ ಶೇ.96 ಅಂಕಗಳೊಂದಿಗೆ ಉತ್ತೀರ್ಣರಾಗಿ ಅಚ್ಚರಿ ಮೂಡಿಸಿದ್ದಾರೆ. ಬ್ಯಾಡ್ಮಿಂಟನ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ರೇಷ್ಮಾ ಕಾರ್ತಿಕ್ ಕಾಮರ್ಸ್ ವಿಭಾಗದಲ್ಲಿ ಶೇ.88 ಅಂಕ ಪಡೆದು ಉತ್ತೀರ್ಣರಾಗಿದ್ದಾರೆ.

**ಇದು ಹೇಗೆ ಸಾಧ್ಯವಾಯಿತು?**: ಸಾಮಾನ್ಯವಾಗಿ ಕ್ರೀಡಾಪಟುಗಳಿಗೆ ವಿರಾಮ ಎನ್ನುವುದೇ ಇರುವುದಿಲ್ಲ. ತರಬೇತಿ ಶಿಬಿರಗಳಲ್ಲಿ ಪಾಲ್ಗೊಳ್ಳುವುದು ಹಾಗೂ ಸ್ಪರ್ಧೆಗಳಿಗೆ ಹಾಜರಾಗುವುದು ಅವರ ನಿತ್ಯದ ಬದುಕಾಗಿರುತ್ತದೆ. ಆದರೆ ಆಳ್ವಾಸ್ ಸಂಸ್ಥೆಯಲ್ಲಿ ಕ್ರೀಡೆಯ ಜತೆಯಲ್ಲೇ ಕ್ರೀಡಾಪಟುಗಳ ಶೈಕ್ಷಣಿಕ ಬದುಕಿನ ಕಡೆಗೆ ಗಮನಹರಿಸಲಾಗಿದೆ. ಆಳ್ವಾಸ್‌ನಲ್ಲಿ ಕ್ರೀಡಾಪಟುಗಳಿಗೆ ಪ್ರತ್ಯೇಕ ಕ್ರೀಡಾ ಹಾಸ್ಟೆಲ್ ಇರುತ್ತದೆ. ಆದರೆ ಕ್ರೀಡಾಕೂಟ ಇಲ್ಲದ ಸಂದರ್ಭವನ್ನು ನೋಡಿ ಕ್ರೀಡಾಪಟುಗಳನ್ನು ಸಾಮಾನ್ಯ ಹಾಸ್ಟೆಲ್‌ಗೆ ಸ್ಥಳಾಂತರಿಸಲಾಗುತ್ತದೆ. ಅಲ್ಲಿ ಪರೀಕ್ಷಾ ಸಿದ್ಧತೆ ಕಡೆಗೆ ಹೆಚ್ಚಿನ ಗಮನಹರಿಸಲಾಗುತ್ತದೆ. ಕ್ರೀಡಾಪಟು ಗಳಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಇದರಿಂದಾಗಿ ಈ ಬಾರಿಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಾವುದೇ ಕ್ರೀಡಾಪಟು ಅನುತ್ತೀರ್ಣರಾಗಿಲ್ಲ ಎಂಬುದು ವಿಶೇಷ. ರಾಷ್ಟ್ರ ಮತ್ತು ರಾಜ್ಯ ಮಟ್ಟದ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ಸ್ಪರ್ಧಿಸಿ ಪದಕ ಗೆದ್ದಿರುವ ಪ್ರವೀಣ್ ದ್ವಿತೀಯ ಪಿಯುಸಿಯಲ್ಲಿ ಶೇ.94.33 ಅಂಕ ಪಡೆದು ಟೀಕಾಕಾರರ ಬಾಯಿ ಮುಚ್ಚಿಸಿದ್ದಾರೆ. ಅನುಷಾ ಪೂಜಾರಿ ಹಾಗೂ ನಿಶಾಂತ್ ಕೂಡ ನಿರಂತರ ಕ್ರೀಡೆಯಲ್ಲಿ ತೊಡಗಿಕೊಂಡರೂ ಪರೀಕ್ಷೆಯಲ್ಲಿ ಮಾತ್ರ ಶೇ.90 ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ.

**ಕ್ರೀಡಾಪಟುಗಳ ಸಾಧನೆ**: ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸಿದ ವಿವಿಧ ಕ್ರೀಡಾಕೂಟಗಳಲ್ಲಿ ಆಳ್ವಾಸ್ ವಿದ್ಯಾರ್ಥಿಗಳು ಎಂಟು ವಿಭಾಗಗಳಲ್ಲಿ ಚಾಂಪಿಯನ್ ಪಟ್ಟ ಗೆದ್ದಿದ್ದಾರೆ. 66 ಮಂದಿ ಕ್ರೀಡಾಪಟುಗಳು ರಾಷ್ಟ್ರಮಟ್ಟದಲ್ಲಿ ನಡೆದ ಜೂನಿಯರ್ ಹಾಗೂ ಸೀನಿಯರ್ ವಿಭಾಗಗಳಲ್ಲಿ ಪದಕ ಗೆದ್ದಿರುತ್ತಾರೆ. ರಾಜ್ಯಮಟ್ಟದಲ್ಲೂ ಹಿರಿಯರ ಹಾಗೂ ಕಿರಿಯರ ವಿಭಾಗದಲ್ಲಿ ಸ್ಪರ್ಧಿಸಿ ಪದಕ ಕೊಳ್ಳೆ ಹೊಡೆದಿದ್ದಾರೆ. 113 ಮಂದಿ ರಾಜ್ಯಮಟ್ಟದಲ್ಲಿ ಸ್ಪರ್ಧಿಸಿ ಅವರಲ್ಲಿ 91 ಮಂದಿ ಪದಕ ಗೆದ್ದಿದ್ದಾರೆ. ರಾಷ್ಟ್ರಮಟ್ಟದಲ್ಲಿ 18 ಕ್ರೀಡಾಪಟುಗಳು ವಿವಿಧ ವಿಭಾಗಗಳಲ್ಲಿ ಚಿನ್ನ ಗೆದ್ದಿದ್ದಾರೆ.

**ಎಸ್‌ಎಸ್‌ಎಲ್‌ಸಿಯಲ್ಲೂ ಶೇ.100 ಪಾಸ್**: ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಹೈಸ್ಕೂಲ್ ವಿಭಾಗದಲ್ಲಿ ಒಟ್ಟು 83 ಕ್ರೀಡಾಪಟುಗಳು ಉಚಿತವಾಗಿ ಶಿಕ್ಷಣ ಪಡೆಯುತ್ತಿದ್ದಾರೆ. ಈ ಬಾರಿ ಒಟ್ಟು 14 ಮಂದಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಿದ್ದು, ಎಲ್ಲರೂ ಉತ್ತಮ ಅಂಕಗಳೊಂದಿಗೆ ಪಾಸಾಗಿದ್ದಾರೆ. ರಾಷ್ಟ್ರಮಟ್ಟದಲ್ಲಿ ಪಾಲ್ಗೊಂಡು, ರಾಜ್ಯಮಟ್ಟದ ಟ್ರಿಪಲ್ ಜಂಪ್‌ನಲ್ಲಿ ಚಿನ್ನ ಗೆದ್ದಿರುವ ಪ್ರವೀಣ್ ಕೊಠಾರಿ ಶೇ. 92.96 ಅಂಕ ಪಡೆದು ಕ್ರೀಡೆಯ ಜತೆಯಲ್ಲೇ ಶಿಕ್ಷಣದಲ್ಲೂ ಯಶಸ್ಸು ಕಾಣಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ. 10 ವಿದ್ಯಾರ್ಥಿಗಳು ಪ್ರಥಮದರ್ಜೆ ಹಾಗೂ ಒಬ್ಬ ಕ್ರೀಡಾಪಟು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಹೈಸ್ಕೂಲ್‌ನಲ್ಲಿ ಕಲಿಯುತ್ತಿರುವ ಕ್ರೀಡಾಪಟುಗಳಲ್ಲಿ 30 ಮಂದಿ ರಾಷ್ಟ್ರ ಮಟ್ಟದಲ್ಲಿ ಪಾಲ್ಗೊಂಡು 13 ಪದಕ ಗೆದ್ದಿದ್ದಾರೆ. ರಾಜ್ಯಮಟ್ಟದಲ್ಲಿ ಒಟ್ಟು 45 ಮಂದಿ ಸ್ಪರ್ಧಿಸಿ 31 ಪದಕ ತಮ್ಮದಾಗಿಸಿಕೊಂಡಿದ್ದಾರೆ.



ಶೇ.88 ಅಂಕ ಗಳಿಸಿದ ರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ್ತಿ ರೇಷ್ಮಾ ಕಾರ್ತಿಕ್



ಕೇವಲ ಪದಕ ಗೆದ್ದರೆ ಸಾಲದು, ಶಿಕ್ಷಣದಲ್ಲೂ ಕ್ರೀಡಾಪಟುಗಳು ಬದುಕನ್ನು ರೂಪಿಸಿಕೊಳ್ಳಬೇಕು. ಹಾಗಾದಲ್ಲಿ ಕ್ರೀಡಾ ಬದುಕಿನ ನಂತರ ಅವರಿಗೆ ಉದ್ಯೋಗ ಗಳಿಸಲು ನೆರವಾಗುತ್ತದೆ. ಈ ಪ್ರಮುಖ ಅಂಶವನ್ನು ಗಮನದಲ್ಲಿರಿಸಿಕೊಂಡು ಆಳ್ವಾಸ್‌ನಲ್ಲಿ ಕ್ರೀಡಾಪಟುಗಳಿಗೆ ಶಿಕ್ಷಣ ನೀಡಲಾಗುತ್ತಿದೆ

**-ಡಾ. ಮೋಹನ್ ಆಳ್ವ,**
ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ



ಕ್ರೀಡಾಪಟುಗಳಿಗೆ ಶಿಕ್ಷಣ ಹಾಗೂ ಕ್ರೀಡೆ ಎರಡರಲ್ಲೂ ಸಮತೋಲನವನ್ನು ಕಾಯ್ದುಕೊಳ್ಳಲು ನಾವು ನೆರವು ನೀಡಬೇಕು. ಹಾಗಾದಲ್ಲಿ ಅವರು ಶಿಕ್ಷಣದಿಂದ ದೂರ ಉಳಿಯುವ ಸಮಸ್ಯೆ ದೂರವಾಗುತ್ತದೆ.

**-ಡಾ. ಶಂಕರ್ ಯುವಿ,**
ಕ್ರೀಡಾ ನಿರ್ದೇಶಕರು ಜೈನ್ ವಿಶ್ವವಿದ್ಯಾನಿಲಯ ಬೆಂಗಳೂರು